# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 796 (921)
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದೇವನಹಳ್ಳಿ ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಮೊದಲನೇ ಮತ್ತು ಎರಡನೇ ಹಂತ (ಹರಳೂರು-ಮುದ್ದೇನಹಳ್ಳಿ) ಪ್ರದೇಶದಲ್ಲಿ ಬ್ರಿಗೇಡ್ ಸಂಸ್ಥೆಯವರಿಗೆ ಎಷ್ಟು ಎಕರೆ ಪ್ರದೇಶವನ್ನು ಹಂಚಿಕೆ ಮಾಡಲಾಗಿದೆ; ಎಷ್ಟು ಎಕರೆ ಪ್ರದೇಶವನ್ನು ಯಾವ ಯಾವ ಉದ್ದೇಶಕ್ಕೆ ಯಾವಾಗ ಹಂಚಿಕೆ ಮಾಡಲಾಗಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಜಿಲ್ಲೆ, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ 1 ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಮೆ: ಬ್ರಿಗೇಡ್ ಸಂಸ್ಥೆಯವರಿಗೆ ಹಂಚಿಕೆ ಮಾಡಿರುವ ಜಮೀನಿನ ವಿವರ ಈ ಕೆಳಕಂಡಂತಿದೆ:-<br><br>1. ಮೆ: Brigade Estates & Projects Pvt Ltd. ರವರ Aerospace Defence Components Manufacturing Activities along with IT/ITES Park ಯೋಜನೆಗಾಗಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದ ನಿವೇಶನ ಸಂ: 8-ಪಿ, 9 ಮತ್ತು 10 ರಲ್ಲಿ ಮೊದಲು 25.00 ಎಕರೆ ಜಮೀನನ್ನು ದಿನಾಂಕ: 30.09.2012ರಂದು ಹಂಚಿಕೆ ಮಾಡಿ, ದಿನಾಂಕ: 29.06.2019 ರಂದು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ಮಾಡಿಕೊಡಲಾಗಿದೆ.<br><br>ಹಂಚಿಕೆಯಾದ ಜಮೀನಿನಲ್ಲಿ ಕೆ.ಐ.ಎ.ಡಿ.ಬಿ.ಯು ಒಳ ಚರಂಡಿಯನ್ನು ನಿರ್ಮಿಸಿದ್ದರಿಂದ ನಿವೇಶನದ ಅಳತೆಯನ್ನು ಪರಿಷ್ಕರಿಸಿ 24.77 ಎಕರೆ ಜಮೀನಿಗೆ ಪರಿಷ್ಕೃತ ಸ್ವಾಧೀನ ಪತ್ರ ದಿನಾಂಕ: 31.03.2021 ರಂದು ನೀಡಿದ್ದು, ಸದರಿ ಜಮೀನಿಗೆ ದಿನಾಂಕ: 26.07.2021 ರಂದು ತಿದ್ದುಪಡಿ ಕರಾರು ಪತ್ರ |
| (ಆ) | ಕೆ.ಐ.ಎ.ಡಿ.ಬಿ.ಯ ಹಂಚಿಕೆ ನಿಯಮದಂತೆ ಸದರಿ ಸಂಸ್ಥೆಯವರು ಮೊದಲನೆ ಹಂತದಲ್ಲಿ ಹಂಚಿಕೆಯಾಗಿರುವ ಪ್ರದೇಶದಲ್ಲಿ ಯೋಜನೆಯನ್ನು ನಿಗದಿತ ಸಮಯದಲ್ಲಿ ಕಾರ್ಯಗತಗೊಳಿಸದಿರುವುದು | |

| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾಡಿಕೊಡಲಾಗಿದೆ.<br>ಮುಂದುವರೆದು, ದಿನಾಂಕ: 21.10.2022 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಯೋಜನೆ ಅನುಷ್ಠಾನಗೊಳಿಸಲು ಸದರಿ ಕಂಪನಿಗೆ 24 ತಿಂಗಳ ಹೆಚ್ಚುವರಿ ಕಾಲಾವಕಾಶ ನೀಡಲು ಮತ್ತು Aerospace Defence Components Manufacturing Activities along with IT/ITES Park ಜೊತೆಗೆ Data Centre activity ಸೇರಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ. ಅದರಂತೆ ದಿನಾಂಕ: 14.11.2022 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ.<br>2. ಮೆ: Brigade Foundation ರವರ Vocational Training Institute ಯೋಜನೆಗಾಗಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆಯಾದ ನಿವೇಶನ ಸಂ: 10-ಪಿ ರಲ್ಲಿ 5.00 ಎಕರೆ ಜಮೀನಿಗೆ ದಿನಾಂಕ: 08.05.2013ರಂದು ಹಂಚಿಕೆ ಮಾಡಿದ್ದು, 4.75 ಎಕರೆ ಜಮೀನಿಗೆ ದಿನಾಂಕ: 31.08.2019 ರಂದು 99 ವರ್ಷಗಳ ಗುತ್ತಿಗೆ ಅವಧಿಗೆ ಗುತ್ತಿಗೆ ಕರಾರು ಪತ್ರ ಮಾಡಿಕೊಡಲಾಗಿದ್ದು, ಗುತ್ತಿಗೆ ಕರಾರು ಪತ್ರದನ್ವಯ ಯೋಜನೆ ಅನುಷ್ಠಾನಗೊಳಿಸಲು 03 ವರ್ಷಗಳ ಕಾಲಾವಕಾಶವು ದಿನಾಂಕ: 31.08.2022 ರಂದು ಪೂರ್ಣಗೊಂಡಿರುತ್ತದೆ.<br>ಕಂಪನಿಯು ಕಟ್ಟಡ ನಕ್ಷೆ ಅನುಮೋದನೆ ಪಡೆದುಕೊಂಡಿದ್ದು, ಕಟ್ಟಡ ಕಾಮಗಾರಿ ಪ್ರಾರಂಭಿಸಿ ಯೋಜನೆ ಅನುಷ್ಠಾನಗೊಳಿಸದ ಕಾರಣ, ಗುತ್ತಿಗೆ ಕರಾರು ಪತ್ರದ ಷರತ್ತುಗಳನ್ವಯ ಕೆಐಎಡಿ ಕಾಯ್ದೆ ಕಲಂ 34-ಬಿ ರಡಿ ನೋಟೀಸ್ ನೀಡಿದ್ದು, ಅವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. |

| | | |
|---|---|---|
| | | 3. ಮೆ: Brigade Tetrarch Pvt. Ltd ರವರ Affordable Housing Project ಯೋಜನೆಗಾಗಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಹಾರ್ಡ್‌ವೇರ್ ಸೆಕ್ಟರ್)ರಲ್ಲಿ ನಿವೇಶನ ಸಂ: ಆರ್-5 ಮತ್ತು ಆರ್-8 ರಲ್ಲಿನ 50.00 ಎಕರೆ ಜಮೀನನ್ನು ದಿನಾಂಕ: 04.04.2017ರಂದು ಹಂಚಿಕೆ ಮಾಡಿದ್ದು, ದಿನಾಂಕ: 02.03.2019 ರಂದು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ಮಾಡಿಕೊಡಲಾಗಿದೆ.<br>ಅದರಂತೆ ಕಂಪನಿಯು ಯೋಜನೆ ಅನುಷ್ಠಾನಗೊಳಿಸಲು ದಿನಾಂಕ: 02.03.2026 ರವರೆಗೆ (6 ವರ್ಷ) ಕಾಲಾವಕಾಶವಿದ್ದು, ಸದರಿ ಕಂಪನಿಯು ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಂಡಿರುತ್ತಾರೆ.<br>4. ಮೆ: Tetrarch Developers Ltd ರವರಿಗೆ Multisector Industrial Park, Aerospace, Defence, Data Centres, Electronics, Hitech Logistics, Housing & Other Social Infrastructure Activities ಯೋಜನೆಗಾಗಿ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, 2ನೇ ಹಂತದ ನಿವೇಶನ ಸಂ: 305, 306, 307, 308 & 309 ರಲ್ಲಿ ಒಟ್ಟು 74.21 ಎಕರೆ ಜಮೀನನ್ನು ದಿನಾಂಕ: 13.06.2022ರಂದು ಹಂಚಿಕೆ ಮಾಡಲಾಗಿದೆ. |
| (ಇ) | ಹಾಗಾದರೆ ಮಂಜೂರಾತಿ ರದ್ಧತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮೆ: Brigade Estates & Projects Pvt Ltd ಮತ್ತು ಮೆ: Brigade Tetrarch Pvt Ltd. ರವರಿಗೆ ಹಂಚಿಕೆಯಾದ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶವಿದೆ.<br>ಮೆ: Brigade Foundation ರವರಿಗೆ ಹಂಚಿಕೆಯಾದ ಜಮೀನಿನಲ್ಲಿ ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶ ಮುಗಿದು ವಿಫಲಾಗಿರುವುದರಿಂದ ಸದರಿ ಸಂಸ್ಥೆಯ ವಿರುದ್ಧ ಕೆಐಎಡಿ ಕಾಯ್ದೆ ಕಲಂ 34-ಬಿ ರಡಿ ನೋಟೀಸ್ ನೀಡಿ, ಅವರ ವಿರುದ್ಧ ಕ್ರಮಜರುಗಿಸಲಾಗುತ್ತಿದೆ. |

| | | |
|---|---|---|
| (ಈ) | ಸದರಿ ಸಂಸ್ಥೆಗೆ ಎರಡನೇ ಹಂತದ ಹರಳೂರು-ಮುದ್ದೇನಹಳ್ಳಿ ಪ್ರದೇಶದಲ್ಲಿ ಕೈಗಾರಿಕಾ ಬಡಾವಣೆ ಪೂರ್ಣ ಪ್ರಮಾಣದಲ್ಲಿ ನಿರ್ಮಾಣವಾಗದೆ, ಅಧಿಸೂಚನೆ ಹೊರಡಿಸದೆ ಸುಮಾರು 20 ಎಕರೆಗೂ ಮೇಲ್ಪಟ್ಟ ಮತ್ತೊಂದು ಭೂಮಿಯನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆ.ಐ.ಎ.ಡಿ.ಬಿ.ಯು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಹಂತದಲ್ಲಿಯೇ ಸಮಾನಾಂತರವಾಗಿ ಹಂಚಿಕೆ ಕಾರ್ಯವನ್ನು ಪ್ರಾರಂಭಿಸುವ ಪ್ರಕ್ರಿಯೆಯನ್ನು ಮೊದಲಿನಿಂದಲೂ ಪಾಲಿಸುತ್ತಾ ಬಂದಿರುತ್ತದೆ.<br><br>ಅದರಂತೆ ಮೆ: **Tetrarch Developers Ltd** ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, 2ನೇ ಹಂತದ ನಿವೇಶನ ಸಂ: 305, 306, 307, 308 & 309 ರಲ್ಲಿ ಒಟ್ಟು 74.21 ಎಕರೆ ಜಮೀನನ್ನು ದಿನಾಂಕ: 13.06.2022ರಂದು ಹಂಚಿಕೆ ಮಾಡಲಾಗಿದೆ. |
| (ಉ) | ಸದರಿ ಸಂಸ್ಥೆ ಮೊದಲನೆ ಹಂತದಲ್ಲಿ ನಿಗದಿತ ಅವಧಿಯಲ್ಲಿ ಕೈಗಾರಿಕೆಯನ್ನು ಪ್ರಾರಂಭಿಸದಿರುವ ಇವರಿಗೆ 2ನೇ ಹಂತದಲ್ಲಿ 20 ಎಕರೆ ಭೂಮಿಯನ್ನು ಹಂಚಿಕೆ ಮಾಡಿ, ನಿಯಮ ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೇಲೆ ತಿಳಿಸಿದಂತೆ, ಮೆ: Brigade Estates & Projects Pvt Ltd. ಮತ್ತು ಮೆ: Brigade Tetrarch Pvt Ltd. ರವರಿಗೆ ಹಂಚಿಕೆಯಾದ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶವಿರುತ್ತದೆ.<br><br>ಮೆ: Brigade Foundation ರವರಿಗೆ ಹಂಚಿಕೆಯಾದ ಜಮೀನಿನಲ್ಲಿ ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶ ಮುಗಿದು ವಿಫಲರಾಗಿರುವುದರಿಂದ ಸದರಿ ಸಂಸ್ಥೆಯ ವಿರುದ್ಧ ಕೆಐಎಡಿ ಕಾಯ್ದೆ ಕಲಂ 34-ಬಿ ರಡಿ ನೋಟೀಸ್ ಮಾಡಿದ್ದು, ಅವರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. |
| (ಊ) | ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ: ಸಿಐ 320 ಐಎಪಿ (ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು